


# ಸ್ವಚ್ಛ ಶನಿವಾರದಿಂದ ಬಸವನಗುಡಿ ಕೊಪ್ಪಲು ಬಸ್ ತಂಗುದಾಣಕ್ಕೆ ಹೊಸ ರೂಪ

ಸಾರ್ವಜನಿಕ ಸ್ಥಳಗಳು, ಪ್ರವಾಸಿ ತಾಣಗಳು, ಬಸ್ ನಿಲ್ದಾಣ, ಸಮುದಾಯ ಶೌಚಾಲಯಗಳು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ನಿರ್ಮಾಣವಾಗಿವೆ. ಇವುಗಳು ಸಾರ್ವಜನಿಕರ ಆಸ್ತಿಯಾಗಿದೆ. ಸರ್ಕಾರ ಕಲ್ಪಿಸಿಕೊಟ್ಟಿರುವ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದು ಪ್ರತಿಯೊಬ್ಬ ನಾಗರಿಕರ ಆದ್ಯ ಕರ್ತವ್ಯವಾಗಿದೆ. ಆದರೆ ಸಾಕಷ್ಟು ಜನರಿಗೆ ಸಾರ್ವಜನಿಕ ಆಸ್ತಿಗಳ ಮಹತ್ವದ ಕುರಿತು ಇನ್ನೂ ಅರಿವಾಗಿಲ್ಲ.

ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಗುಮ್ಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬಸವನಗುಡಿ ಕೊಪ್ಪಲು ಗ್ರಾಮದಲ್ಲಿ ಈ ಮೊದಲು ಸಾರ್ವಜನಿಕ ಆಸ್ತಿಗಳನ್ನು ನಿರ್ಲಕ್ಷಿಸಲಾಗಿತ್ತು. ಬಸವನಗುಡಿ ಕೊಪ್ಪಲು ಗ್ರಾಮದಲ್ಲಿ ಸುಮಾರು ವರ್ಷಗಳ ಹಿಂದೆ ಪ್ರಯಾಣಿಕರಿಗಾಗಿ ನಿರ್ಮಾಣ ಮಾಡಲಾಗಿದ್ದ ಬಸ್ ತಂಗುದಾಣವು ಸ್ವಚ್ಛತೆಯ ಕೊರತೆ, ನಿರ್ಲಕ್ಷ್ಯದಿಂದ ಬಳಕೆ ಮಾಡಲಾಗದ ದುಸ್ಥಿತಿಗೆ ತಲುಪಿತ್ತು.

ಇತ್ತೀಚೆಗೆ ಗ್ರಾಮದ ಅಕ್ರಮ ಚಟುವಟಿಕೆಯ ಸ್ಥಳವಾಗಿ ಮಾರ್ಪಾಡಾಗಿತ್ತು. ಇದರಿಂದ ಪ್ರಯಾಣಿಕರು ತಂಗುದಾಣವನ್ನು ಆಶ್ರಯಿಸದೆ ಬಿಸಲು ಮಳೆ ಲೆಕ್ಕಿಸದೆ ರಸ್ತೆ ಬದಿಯಲ್ಲಿ ನಿಂತು ಬಸ್ಸು ಹತ್ತುವ ಸ್ಥಿತಿ ನಿರ್ಮಾಣವಾಗಿತ್ತು. ಈ ಸುದ್ದಿಯು ಗ್ರಾಮ ಪಂಚಾಯಿತಿಯ ಅಧಿಕಾರಿಗಳನ್ನು ತಲುಪಿದಾಗ ಬಸ್ ತಂಗುದಾಣವನ್ನು ಸುಸ್ಥಿತಿಗೆ ತರಲು ನಿರ್ಧರಿಸಿದರು.

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಪ್ರತಿ ತಿಂಗಳ ಮೊದಲ ಶನಿವಾರದಂದು ಸ್ವಚ್ಛ ಶನಿವಾರದ ಅಂಗವಾಗಿ ಗ್ರಾಮವನ್ನು ಸ್ವಚ್ಛಗೊಳಿಸುವ ಕಾರ್ಯ ಕೈಗೊಳ್ಳಲಾಗುತ್ತದೆ. ಈ ನಿಟ್ಟಿನಲ್ಲಿ ಬಸವನಗುಡಿ ಕೊಪ್ಪಲು ಗ್ರಾಮದ ಬಸ್ ತಂಗುದಾಣದ ಸುತ್ತಮುತ್ತ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತೆಗೆದು ಸ್ವಚ್ಛ ಮಾಡುವುದಕ್ಕೆ ಸೀಮಿತವಾಗದೆ ಸಾರ್ವಜನಿಕ ಮೆಚ್ಚುಗೆ ಸೂಚಿಸುವಂತಹ ಕಾರ್ಯ ಕೈಗೊಳ್ಳಬೇಕೆಂದು ಯೋಜನೆ ರೂಪಿಸಲಾಯಿತು.

ಸ್ವಚ್ಛತಾ ಶ್ರಮದಾನದಿಂದ ತ್ಯಾಜ್ಯಗಳಿಂದ ತುಂಬಿ, ಕಳೆಗುಂದಿದ್ದ ಬಸ್ ತಂಗುದಾಣ ಗ್ರಾಮ ಪಂಚಾಯಿತಿ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಗ್ರಾಮಸ್ಥರ ಸಹಕಾರದಿಂದ ನವೀಕರಣಗೊಂಡಿದೆ.

ಸ್ವಚ್ಛ ಶನಿವಾರದ ಪ್ರಯುಕ್ತ ಬಸ್ ತಂಗುದಾಣವನ್ನು ಸ್ವಚ್ಛಗೊಳಿಸುವ ಮುನ್ನ, ಗ್ರಾಮ ಪಂಚಾಯಿತಿ ಅಧಿಕಾರಿಗಳು, ಸಿಬ್ಬಂದಿಗಳು ಸಾರ್ವಜನಿಕರಿಗೆ, ಸ್ವಚ್ಛ ಶನಿವಾರ, ಸಾರ್ವಜನಿಕರ ಸ್ಥಳಗಳ ಸ್ವಚ್ಛತೆಯ ಮಹತ್ವದ ಕುರಿತು ಜನರಿಗೆ ಅರಿವು ಮೂಡಿಸಿದರು.

ಸ್ವಚ್ಛತೆ, ಸ್ವಚ್ಛ ಶನಿವಾರದ ಮಹತ್ವವನ್ನು ಅರಿತ ಗ್ರಾಮಸ್ಥರು ಬಸ್ ತಂಗುದಾಣದ ಸ್ವಚ್ಛತೆಯಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಸಹಕಾರ ನೀಡುವ ಮೂಲಕ ಸ್ವಚ್ಛತಾ ಶ್ರಮದಾನದಲ್ಲಿ ಭಾಗಿಯಾದರು.




ಸ್ವಚ್ಛ ಶನಿವಾರದಿಂದ ಬದಲಾದ ಬಸ್ ತಂಗುದಾಣದ ಚಿತ್ರಣ:

ಸ್ವಚ್ಛ ಶನಿವಾರದ ಅಂಗವಾಗಿ ಬಸ್ ತಂಗುದಾಣವನ್ನು ನವೀಕರಿಸಿದ ನಂತರ, ಸಾರ್ವಜನಿಕರಿಗೆ, ವೃದ್ಧರಿಗೆ ಬೇಸಿಗೆಕಾಲದಲ್ಲಿ ವಿಶ್ರಮಿಸಲು ಸುರಕ್ಷಿತ ಸ್ಥಳವಾಗಿ ಮಾರ್ಪಡಾಗಿದೆ. ಬಸ್ ನಿಲ್ದಾಣದ ಗೋಡೆಗಳಿಗೆ ಗ್ರಾಮದ ನಡಿಗೆ ಸ್ವಚ್ಛತೆಯ ಕಡೆಗೆ, ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಿ, ಮರಗಿಡ ಬೆಳೆಸಿ ಮಿತವಾಗಿ ನೀರು ಬಳಸಿ ಎಂಬೆಲ್ಲಾ ಜನ ಜಾಗೃತಿ ಸಂದೇಶಗಳನ್ನು ಬರೆಯಲಾಗಿದೆ.

ಒಟ್ಟಿನಲ್ಲಿ ಗ್ರಾಮ ಪಂಚಾಯಿತಿ ಅಧಿಕಾರಿಗಳು ಹಾಗೂ ಸಾರ್ವಜನಿಕರ ಶ್ರಮದಿಂದ ಬಳಕೆಗೆ ಯೋಗ್ಯವಲ್ಲದ ಬಸ್ ತಂಗದಾಣ ಇಂದು ಸುಸ್ಥಿತಿಗೆ ತಲುಪಿ ಸುರಕ್ಷಿತ ತಾಣವಾಗಿ ಬದಲಾಗಿದೆ.

**ಸಾರ್ವಜನಿಕ ಸ್ಥಳಗಳನ್ನು ಕಾಪಾಡುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ**

ಸ್ವಚ್ಛ ಸಂಕೀರ್ಣ ಜಲೋತ್ಸವ